# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

# Bangalore Development Authority

ಸಂಖ್ಯೆ :
No.

ಅನುಸೂಚಿ-7
(ಉಪವಿಧಿ ಸಂಖ್ಯೆ: 5.3)

ದಿನಾಂಕ :
Date :

## ಪ್ರಾರಂಭಿಕ ಪ್ರಮಾಣ ಪತ್ರ

No. BDA/EM/EO-2/TA-3/CC/T-233 /2015-16,  Dated: 22/9/15

ಇವರಿಗೆ,

M/s Jana Jeeva Estates Pvt Ltd,
No. 20 old No. 965, Ground Floor,
Lavanya Residency, Church Road,
New Thippasandra, Bangalore – 75.

ವಿಷಯ:- ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಹಳೇಹಳ್ಳಿ ಗ್ರಾಮದಲ್ಲಿನ ಸರ್ವೆ ನಂ. 54(ಪಿ) ರಲ್ಲಿನ ಒಟ್ಟು 1 ಎಕರೆ 29 ಗುಂಟೆ ವಿಸ್ತೀರ್ಣ ಪ್ರದೇಶದಲ್ಲಿ ಬಹುವಸತಿ ಕಟ್ಟಡ ನಿರ್ಮಾಣ ಕಾಮಗಾರಿಯ ಆರಂಭದ ಸಲುವಾಗಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಿಕೆ ಬಗ್ಗೆ.

ಉಲ್ಲೇಖ:-1.ಮೂಲ ನಕ್ಷೆ ಮಂಜೂರಾತಿ ಸಂಖ್ಯೆ ಬೆಂಅಪ್ರಾ/ನಮ/ಅಸ/ಅಅ-2/ತಾ.ಸ-3/ಉ/07/2013-14 ದಿನಾಂಕ 29.05.2013.
2. ನಿಮ್ಮ ಅರ್ಜಿಯ ಸಂಖ್ಯೆ: 22.04.2015.
3. ಮಾನ್ಯ ಆಯುಕ್ತರ ಆದೇಶ ಸಂಖ್ಯೆ 4483 ದಿನಾಂಕ 09.09.2015.

ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಹಳೇಹಳ್ಳಿ ಗ್ರಾಮದಲ್ಲಿನ ಸರ್ವೆ ನಂ. 54(ಪಿ)ರಲ್ಲಿನ ಒಟ್ಟು 1 ಎಕರೆ 29 ಗುಂಟೆ ವಿಸ್ತೀರ್ಣ ಪ್ರದೇಶದಲ್ಲಿ ಬಹುವಸತಿ ಕಟ್ಟಡವು ತಳಮಹಡಿ+ನೆಲಮಹಡಿ+4 ಮೇಲಂತಸ್ತು+ಟೆರೇಸ್ ಒಳಗೊಂಡ ಒಟ್ಟು 150 ಯುನಿಟ್ಸ್ ಗಳನ್ನು ಹೊಂದಿರುವ ಬಹುವಸತಿ ಕಟ್ಟಡ ಕಟ್ಟಲು ನಕ್ಷೆಗೆ ಮಂಜೂರಾತಿ ನೀಡಿದ್ದು ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರು (ಉ) ರವರು ದಿನಾಂಕ: 25.04.2015 ರಂದು ಸ್ಥಳ ಪರಿವೀಕ್ಷಣೆ ಮಾಡಿದ್ದು, ಕಟ್ಟಡದ ಸುತ್ತಲೂ ನಡುಜಾಗವನ್ನು ಮಂಜೂರಾದ ನಕ್ಷೆಯನ್ನು ಬಿಡಲಾಗಿದ್ದು, ಕೂಡಿಸಿದ ಅಂಕಣಗಳನ್ನು ನಕ್ಷೆ ಸಂಖ್ಯೆ: ಬೆಂಅಪ್ರಾ/ನಮ/ಅಸ/ಅಅ-2/ತಾ.ಸ-3/ಉ/7/2013-14 ದಿನಾಂಕ: 29.05.2013 ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂಜೂರು ಮಾಡಿದ ಕಟ್ಟಡ, ನಕ್ಷೆಯೊಂದಿಗೆ ಹೋಲಿಸಿ ಪರೀಕ್ಷಿಸಲಾಗಿ ಅದು ಮಂಜೂರಾದ ನಕ್ಷೆ ಮೇರೆಗೆ ಇದ್ದುದು ಕಂಡು ಬಂದಿದೆ. ಆದ್ದರಿಂದ ಈ ಮುಂದಿನ ಷರತ್ತುಗಳಿಗೊಳಪಟ್ಟು ಕಾಮಗಾರಿಯನ್ನು ಪ್ರಾರಂಭಿಸಲು ಈ ಮೂಲಕ ಅನುಮತಿ ನೀಡಲಾಗಿದೆ.

1. ಕಾಮಗಾರಿಯಲ್ಲಿ ಯಾವುದೇ ಮಿತಿಮೀರುವಿಕೆ, ಬದಲಾವಣೆಗಳನ್ನು ಮಾಡದೆ ಅಥವಾ ನಿಯಮ ಉಪವಿಧಿಯನ್ನು ಉಲ್ಲಂಘಿಸದಂತೆ ಮಂಜೂರಾದ ಮಾರ್ಪಾಡಿತ ನಕ್ಷೆಯ ಪ್ರಕಾರ ಕಟ್ಟು ನಿಟ್ಟಾಗಿ ಕಾಮಗಾರಿಯನ್ನು ನಡೆಸತಕ್ಕದ್ದು.
2. ಕಾಮಗಾರಿಯು ಅಡಿಪಾಯ ಅಥವಾ ಅಡಿಗಲ್ಲು, ಅಂಕಣಗಳನ್ನು ಮಾಡಿಸುವ ಕಾರ್ಯ ಮುಕ್ತಾಯವಾದ ಹಂತವನ್ನು ತಲುಪಿದಾಗ, ಕಾರ್ಯ ಪ್ರಗತಿಯ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ತಿಳಿಸುವ ಮೂಲಕ ಮಂಜೂರಾದ ನಕ್ಷೆ, ನಿಯಮಗಳು ಉಪವಿಧಿಗಳ ಮೇರೆಗೆ ನಿರ್ಮಾಣ ಕಾರ್ಯವು ನಡೆದಿರುವ ಬಗ್ಗೆ ಪರೀಕ್ಷೆ ನಡೆಸಲು ಪ್ರಾಧಿಕಾರಕ್ಕೆ ಅನುಕೂಲ ಕಲ್ಪಿಸಿ ಕೊಡಬೇಕು.

22/9/15
ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಯಥಾ ಪ್ರತಿಯನ್ನು: ಕಾರ್ಯಪಾಲಕ ಅಭಿಯಂತರರು (ಉ) ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.



Scanned by CamScanner